

ಸಾಹಿತ್ಯಕ್ಕಾಗಿ ಕೊಡಲಾಗುವ ಅತ್ಯುನ್ನತ ಪ್ರಶಸ್ತಿಗಳಾದ ನೊಬೆಲ್ ಮತ್ತು ಬುಕರ್ ಸಾಹಿತ್ಯಾಸ್ತಕರ ಗಮನವನ್ನು ಸದಾ ಸೆಳೆಯುತ್ತಲೇ ಬಂದಿವೆ. ಪ್ರಶಸ್ತಿಗಳು ಬಹುಮಾನಿತ ಕೃತಿಗಳ ಕಡೆ ಜಗತ್ತಿನ ಗಮನ ಸೆಳೆಯುವಂತೆ ಮಾಡುವುದಲ್ಲದೇ ಅವನ್ನು ಓದುವಂತೆಯೂ ಒತ್ತಾಯಿಸುತ್ತವೆ. ಪ್ರಸ್ತುತ ಈ ಎರಡು ಪ್ರಶಸ್ತಿಗಳ ಮೂಲಕ ಸುದ್ದಿಯಲ್ಲಿರುವ ಲೇಖಕರು ಮತ್ತು ಅವರ ಕೃತಿಗಳ ಕುರಿತಂತೆ ಇಲ್ಲಿ ಟಿಪ್ಪಣಿಗಳನ್ನು ಕೊಡಲಾಗಿದೆ.